ಹೇಳಿದ್ದಳವಳು. ಅವಳು ಮಾತು ನಿಲ್ಲಿಸಿ ಕುಸುಕುಸು ಮುಂದುವರಿಸಿದರೂ ಅರೆಕ್ಷಣ ಯಾರೂ ಮಾತಾಡಲಿಲ್ಲ.

"ಒಡೆಯಕ್ಕಾರನಿಗೆ ಇಷ್ಟು ನಿಷ್ಠೆಯಿಂದ್ದಿದ್ದ ನಮಗೇ ಹೀಗೆ ಆಗ್ಬೇಕಿತ್ತಾ? ನಮ್ಮ ಜನದ ನಡುವೆ ತಲೆ ಎತ್ತಿಕ್ಕಾಗುದಿಲ್ಲ."

"ಒಡೆಯಕ್ಕಾರನನ್ನು ಇದಕ್ಕೆ ಎಳಿಬೇಡ ಮೈಮೂನ. ನೀವೆಲ್ಲ ಸೈತಾನನಿಗೆ ನಿಷ್ಠೆಯಿಂದಿರುವವರು. ಜೀವಗಳಿಗೆ ಸಂಕಟ ಕೊಡ್ಲಿಕ್ಕೆ ಒಡೆಯಕ್ಕಾರ ಹೇಳಿದ್ದಾನ?" ಅಂದ ಫಕೀರಿಚ್ಚ. "ಕಾಟುಕೋಳಿಯ ಹಾಗೆ ನಿಮ್ಗೆ ಮಸೀದಿ ಬೇಡ. ನಿಸ್ಕಾರ ಬೇಡ. ನೋಂಬೂ ಬೇಡ. ಫಕೀರಿಚ್ಚನಿಗೆ ನಮ್ಮ ಕಷ್ಟ ಅರ್ಥ ಆಗ್ಲಿಕ್ಕಿಲ್ಲ."

ನಿಷ್ಠುರದ ಮಾತಿಗೆ ಫಕೀರಿಚ್ಚ, "ಪಡಚ್ಚೋನೆ!" ಅನ್ನುತ್ತ ಸಶಬ್ದ ಉಸಿರು ಬಿಡುತ್ತ ಅಳುತ್ತಲೇ ಇದ್ದ ರಕ್ಷಾಳತ್ತ ನೋಡಿದ. ತುಂಟಾಟ ಮಾಡಿ ನಡು ರಸ್ತೆಗೆ ಓಡಿದ ಮೇಕೆಮರಿ ವಾಹನಗಳ ದಟ್ಟಣೆ ನಡುವೆ ದಿಕ್ಕೆಟ್ಟು ನಿಂತಂತೆ ಕಂಡಿತು. ಅವಳೊಳಗಿಂದ ನುಗ್ಗಿ ಬರುತ್ತಿರುವ ಅಳು, ಆ ಅಳು ತನಗೆ ಸಂಬಂಧಿಸಿದ್ದಲ್ಲವೆನ್ನುವಂತೆ ತಂದೆಯ ಹಿಂದೆ ತಲೆ ತಗ್ಗಿಸಿಯೇ ನಿಂತಿದ್ದ ಆರೀಫನನ್ನು ಮತ್ತೆ ಮತ್ತೆ ನೋಡಿದ ಫಕೀರಿಚ್ಚನಿಗೆ ಇನ್ನು ಜೋಡಿಸಲು ಏನೂ ಉಳಿದಿಲ್ಲವೆನಿಸಿತು. ರಕ್ಷಾಳ ತಲೆ ಸವರಿ "ನಾಳೆ ನಿನ್ನ ಮನೆಗೆ ಹೋಗುವಾ ಮೋಳೆ" ಅಂದವನೇ ನೆಬಿಸುಮ್ಮನ ಮುಖ ನೋಡುತ್ತ "ಇವಳನ್ನು ಒಳಗೆ ಮಕ್ಕಳೊಟ್ಟಿಗೆ ಮಲಗಿಸು" ಅಂದ. ಮೊಯ್ದಿನ್ನಾಬಾವಾನತ್ತ ತಿರುಗಿ, "ಎಲ್ಲಾ ಮುಗಿಯಿತಲ್ಲ. ನೀವು ಮನೆಗೆ ಹೊರಡಿ ಬಾವಾ" ಅಂದ. ಉಪಚಾರಕ್ಕಾದರೂ ಕೃತಜ್ಞತೆಯ ಮಾತು ಹೇಳಬೇಕೆನಿಸಿದರೂ, ಫಕೀರಿಚ್ಚನ ಧ್ವನಿಯಲ್ಲಿದ್ದ ತೀಕ್ಷ್ಣತೆಗೆ ಮೊಯಿದಿನ್ನಾಬಾವನ ಗಂಟಲಿಂದ ಸ್ವರ ಹೊರಡಲಿಲ್ಲ.

★★★

ತನ್ನ ಹೆಣ್ಣು ಮಕ್ಕಳು ರಕ್ಷಾಳನ್ನು ಒಳ ಕೋಣೆಗೆ ಮಲಗಲು ಕರೆದುಕೊಂಡು ಹೋದೊಡನೆ ನೆಬಿಸುಮ್ಮ ಚಾವಡಿಗೆ ಬಂದಳು. ಎಲೆ ಅಡಿಕೆ ಮಡಿಸುತ್ತಿದ್ದ ಫಕೀರಿಚ್ಚನಿಗೆ ಮಾತ್ರ ಕೇಳಿಸುವಂತೆ, "ಊರಿಗೆಲ್ಲ ಉಪಕಾರ ಮಾಡ್ತೇನೆ ಅಂತ ಹೊರಡುವಾಗ ಹಿಂದೆ ಮುಂದೆ ಆಲೋಚನೆ ಮಾಡುವುದು ಬೇಡ್ವಾ ಮಾಪ್ಳೆ. ನಮ್ಮ ಹಾಜಬ್ಬರನ್ನು ಕರೆಸಿ, ಕುಟುಂಬದವ್ರ ಪಂಚಾಯ್ತಿ ಸೇರಿಸಿದ್ರೆ ಎಲ್ಲರೂ ಬುದ್ಧಿ ಹೇಳ್ತಿದ್ರು. ಸುರೇಶ ಅವಳನ್ನ ಮನೆಗೆ ಸೇರಿಸದಿದ್ರೆ ನಾವೆಂತ ಮಾಡುವುದು. ನಮ್ಮ ಮನೆಯಲ್ಲಿಟ್ಟುಕೊಂಡ್ರೆ ನಮ್ಮ ಮನೆಗೇ ಕಲ್ಲು ಬೀಳ್ಲಿಕ್ಕುಂಟು. ನಮ್ಮ ಮಕ್ಳು ಹೊರಗೆ ಓಡಾಡುವುದು ಹೇಗೆ? ನಮ್ಮ ಬಸ್ಸಿಗೂ ಕಲ್ಲು ಬಿದ್ದೀತು. ಈ ಹುಡುಗಿಗಾದ್ರೂ ನಾಲ್ಕು ಗೋಡೆಯಾಚೆ ಮುಖ ಹಾಕ್ಲಿಕ್ಕೆ ಆದೀತಾ?" ಅಂದಳು.

"ಇಬ್ಬರಿಗೂ ಬೇಡ ಅಂತಾದ ಮೇಲೆ ಪಂಚಾಯ್ತಿ ಸೇರಿಸ್ಲಿಕ್ಕೆಂತ ಉಂಟು ನೆಬಿಸುಮ್ಮ. ನಾಳೆ ಬೆಳಗ್ಗೆ ಸುರೇಶ ಬಂದಾಗ ಇವಳು ಹೊರಗೆ ಬರುವುದು ಬೇಡ. ಬೆಳಗ್ಗೆ ಮಾತಾಡ್ಲಿಕ್ಕೆ ಕೂತ್ರೆ ಸರ್ವಿಸ್ಸಿಗೆ ತಡ ಆಗ್ತದೆ. ಸಂಜೆ ಬಸ್ಸು ಇಡ್ಲಿಕ್ಕೆ ಬಂದಾಗ ಕೂರಿಸಿ ಸಮಾಧಾನದಲ್ಲಿ ಮಾತಾಡಿ ನೋಡುವಾ."

"ಎಂತ ಆಗಿದೆ ನಿಮ್ಗೆ. ಈಗ ರಾತ್ರಿಯೇ ಇದನ್ನು ಇತ್ಯರ್ಥ ಮಾಡಿದ್ರೆ ಆಗ್ಬಹುದು ಅಂತ ನಾನು ಚಿಂತೆ ಮಾಡ್ಲಿಕ್ಕೆ ಸುರು ಮಾಡಿದ್ರೆ ನೀವು ನಾಳೆ ಸಂಜೆ ತನಕ ಈ ಬೆಂಕಿಯನ್ನು ಮನೆಯಲ್ಲಿಟ್ಟುಕೊಳ್ಳುವ ಮಾತಾಡ್ತೀರಿ. ಅದೆಲ್ಲ ಆಗ್ಲಿಕ್ಕಿಲ್ಲ. ಬೆಳಿಗ್ಗೆ ಸುರೇಶ ಮನೆಯಿಂದ ಹೊರಡುವ ಮೊದಲು ಇವಳನ್ನು ಅಲ್ಲಿಗೆ ಕರ್ಕೊಂಡು ಹೋಗಿ. ಇಲ್ಲದಿದ್ರೆ ಪೊಲೀಸ್